**9. ವಿಷಯ ತುರುವೇಕೆರೆ ತಾಲ್ಲೂಕಿನ ಶಿಂಷಾ ನದಿಯಲ್ಲಿ ನಡೆಯುತ್ತಿರುವ ಅಕ್ರಮ ದಂಧೆಗೆಸಂಬಂಧಪಟ್ಟ ಬಗ್ಗೆ**

**ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) :** ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರ ತುರುವೇಕೆರೆಯಲ್ಲಿ ಶಿಂಷಾ ನದಿಯಲ್ಲಿ ದೊಡ್ಡ ಮರಳು ದಂಧೆಯಾಗುತ್ತಿದೆ. ಇದರ ಬಗ್ಗೆ ಬಹಳಷ್ಟು ಸಾರಿ ಬಹಳಷ್ಟು ಸಾರಿ ನಾನು ಸಂಬಂಧಪಟ್ಟ ಡಿ.ಸಿ. ಯವರಿಗೆ ಎಸ್‌ಪಿ. ಯವರಿಗೆ ಪತ್ರ ಬರೆದು ಮೂರ್ನಾಲ್ಕು ಬಾರಿ ಮೀಟಿಂಗ್ ಮಾಡಿದ್ದೇನೆ. ನಾನು ಸತತವಾಗಿ ನಾಲ್ಕು ವರ್ಷದಿಂದ ಹೇಳುತ್ತಿದ್ದೇನೆ, ಆದರೆ ತಹಸೀಲ್ದಾರ್‌ಗೆ ಅಲ್ಲಿಗೆ ಹೊಗುವುದಕ್ಕೆ ಜೀಪ್ ಕೊಟ್ಟಿಲ್ಲ. ತಹಸೀಲ್ದಾರ್ ಒಂದು ಕಡೆ ಏನು ಹೇಳುತ್ತಾರೆಂದರೆ ನಾವು ಲಾರಿಗಳನ್ನು ಹಿಡಿಯಲು ಹೋದರೆ ಸಿಬ್ಬಂದಿಗಳು ನಮ್ಮ ಮೇಲೆ ಎರಗುವ ಸಂಭವವಿದೆ. ಇದನ್ನು 4-5 ಜನ ದಂಧೆ ಮಾಡಿಕೊಂಡಿದ್ದಾರೆ, ಇದೊಂದು ದೊಡ್ಡ ಬಳ್ಳಾರಿ ಮೈನ್ ಇದ್ದ ಹಾಗೆ ಇದೆ. ಅದನ್ನು ನಾಲ್ಕೈದು ಜನ ಮಾತ್ರ ಇಟ್ಟುಕೊಂಡಿದ್ದಾರೆ. ಮಿಕ್ಕಿದವರು ಯಾರೂ ಸಹ ಅಲ್ಲಿಗೆ ಹೋಗುವ ಹಾಗೇ ಇಲ್ಲ. ಇವರು ತುಂಬಿ ಕೊಟ್ಟಮೇಲೆ ಬೇರೆಯವರು ಹೋಗಬೇಕು. ಅಲ್ಲಿ assessment ಮಾಡಿ ಸರ್ಕಾರ ರೇಟ್ ಪ್ರಕಾರ ಒಂದು CFTಗೆ 600 ರೂಪಾಯಿ ಏನೋ ಮಾಡುತ್ತಾರೆ. ಒಂದು ಲಾರಿಗೆ ಸುಮಾರು 8,000 ರೂಪಾಯಿ ಆಗುತ್ತದೆಂದು assess ಮಾಡಿದ್ದಾರೆ. ಅಲ್ಲಿ 8-10 ಸಾವಿರ ರೂಪಾಯಿಯಾದರೆ ಸರ್ಕಾರಕ್ಕೆ ಒಂದು ರೂಪಾಯಿ ಕೂಡ ಕಟ್ಟುವುದಿಲ್ಲ. ರಾತ್ರೋರಾತ್ರಿ ತುಂಬುತ್ತಾರೆ. ಬೆಂಗಳೂರಿನಲ್ಲಿ 20 ರಿಂದ 25 ಸಾವಿರ ರೂಪಾಯಿ ಒಂದು ಲೋಡ್‌ಗೆ ರೇಟ್ ಮಾಡಿದ್ದಾರೆ. ಅದರಲ್ಲಿ ಸಾಧಾರಣವಾಗಿ ಒಬ್ಬೊಬ್ಬರಿಗೆ ಒಂದು ವರ್ಷಕ್ಕೆ ಎರಡರಿಂದ ಮೂರ್ನಾಲ್ಕು ಕೋಟಿ ರೂಪಾಯಿ ಆಗುತ್ತಿದೆ. ಹಾಗಾಗಿ ಸುಮಾರು 300 ರಿಂದ 350 ಕೋಟಿ ರೂಪಾಯಿ ಸರ್ಕಾರಕ್ಕೆ ಲಾಸ್ ಆಗುತ್ತಿದೆ. ತಹಸೀಲ್ದಾರ್‌ಗಂತೂ ಜೀಪ್ ಇಲ್ಲ. ಇದರ ಬಗ್ಗೆ ನಾನೂ ಫೋನ್ ಮಾಡಿ ಹೇಳಿದರೆ ಸಿ.ಎಸ್. ಪುರ ಸಬ್ ಇನ್ಸ್‌ಪೆಕ್ಟರ್ ನೀವು ಬೇಕಾದರೆ ನನ್ನನ್ನು ಟ್ರಾನ್ಸ್‌ಫರ್ ಮಾಡಿಸಿ, ನನ್ನ ಕೈಯಲ್ಲಿ ಆಗುವುದಿಲ್ಲವೆಂದು ಹೇಳುತ್ತಾರೆ, ಅದಕ್ಕೆ ನಾವೇನು ಮಾಡುವುದು?

ಮಾನ್ಯ ಮುಖ್ಯಮಂತ್ರಿಯವರೆ, ದಯಾಮಾಡಿ ತಾವು ಈ ಕಡೆ ಗಮನಹರಿಸಿ, ಒಬ್ಬ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್‌ರವರಿಗೆ ಫೋನ್ ಮಾಡಿ

ನೂರಾರು ಲಾರಿಗಳು ಹೋಗುತ್ತಿವೆ, ಅವುಗಳನ್ನು ಹಿಡಿಯಿರಿ ಎಂದು ಹೇಳಿದರೆ, ಅದಕ್ಕೆ ಅವರು ಇಲ್ಲ. ನನ್ನನ್ನು transfer ಮಾಡಿಸಿ ಎಂದು ಹೇಳಿದರೆ, ಏನು ಅರ್ಥವಿದೆ? ಇಲ್ಲಿ ರೆವಿನ್ಯೂ ಮತ್ತು ಪೊಲೀಸ್‌ನವರು ಇಬ್ಬರೂ ಇದ್ದು, ಇವರೇ ತುಂಬಿ ಫಾರೆಸ್ಟ್‌ನಿಂದ ಹೊರಗಡೆಗೆ ಕಳುಹಿಸುತ್ತಾರೆ. ಬಳ್ಳಾರಿ ಮೈನ್ ಬಗ್ಗೆ ನಿಮ್ಮ ಹೋರಾಟ ಏನು ಇತ್ತು. ಅದಕ್ಕಿಂತ ಇದು ಏನೂ ಕಡಿಮೆ ಇಲ್ಲ. ಇದು ಒಂದು ದೊಡ್ಡ ದಂಧೆಯಾಗಿದೆ. ಅಲ್ಲಿರುವ ಪೊಲೀಸ್ ಸಿಬ್ಬಂದಿಗಳು, ಸಬ್‌ಇನ್‌ಸ್ಪೆಕ್ಟರ್ ರೆವಿನ್ಯೂ ಇಲಾಖೆಯವರು ಅತ್ಯಂತ ಭ್ರಷ್ಟರಿದ್ದಾರೆ. ಅವರೇ ದೊಡ್ಡ ದರೋಡೆ ಮಾಡುತ್ತಿದ್ದಾರೆ, ಇವರು ಕಳೆದ 7-8 ವರ್ಷಗಳಿಂದ ಅಲ್ಲೆ ಇದ್ದಾರೆ.

**ಅಧ್ಯಕ್ಷರು** : ಸಾಕು.

**ಶ್ರೀ ಎಂ.ಟಿ. ಕೃಷ್ಣಪ್ಪ** : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಈ ವಿಷಯ ಜಿಲ್ಲಾ ಸಚಿವರಾದ ಮಾನ್ಯ ಜಯಚಂದ್ರರವರಿಗೂ ಗೊತ್ತಿದೆ.

**ಅಧ್ಯಕ್ಷರು** : ಆಯಿತು.

**ಶ್ರೀ ಎಂ.ಟಿ. ಕೃಷ್ಣಪ್ಪ** : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರಿಗೂ ಗೊತ್ತಿದೆ. ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳು ಲಾಸ್ ಆಗುತ್ತಿದೆ. ಈ ಬಗ್ಗೆ ಉತ್ತರ ಸರ್ಕಾರ ಕೊಡಬೇಕು.

**ಶ್ರೀ ಟಿ.ಬಿ. ಜಯಚಂದ್ರ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂಥ ವಿಷಯ ಪೊಲೀಸ್‌ನ ವೈಫಲ್ಯವೆಂದು ಹೇಳಿದ್ದಾರೆ. ಈ ವಿಷಯವಾಗಿ Home Ministerರವರೊಂದಿಗೆ ಚರ್ಚೆ ಮಾಡಿ ಉತ್ತರ ಕೊಡಿಸುತ್ತೇನೆ.

**ಅಧ್ಯಕ್ಷರು** : O.K., ಮಾನ್ಯ ಕುಮಾರಸ್ವಾಮಿಯವರೆ, ನಿಯಮ 69ರ ಅಡಿಯಲ್ಲಿ ಮಾತನಾಡಿ.

**ಶ್ರೀ ವೈ.ಎಸ್.ವಿ.ದತ್ತ** : ಮಾನ್ಯ ಅಧ್ಯಕ್ಷರೆ, ಮೊನ್ನೆ ಬೀರೂರಿನ ರೈಲ್ವೆ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿದಂತೆ ಪ್ರಸ್ತಾಪ ಮಾಡಿದ್ದು, ಇದಕ್ಕೆ ಉತ್ತರ ಸೋಮವಾರದಂದು ಕೊಡುತ್ತೇವೆಂದು ಹೇಳಿದರು.

**ಅಧ್ಯಕ್ಷರು** : ಮಾನ್ಯ ಮಂತ್ರಿಯವರು ಬಂದರೆ ಉತ್ತರ ಕೊಡಿಸೋಣ.

**ಶ್ರೀ ಗೋವಿಂದ ಎಂ ಕಾರಜೋಳ** : ಮಾನ್ಯ ಅಧ್ಯಕ್ಷರೆ, ನಾನು ವಿಷಯ ಪ್ರಸ್ತಾಪ ಮಾಡಲು ಅವಕಾಶ ಕೊಡಿ.

**ಅಧ್ಯಕ್ಷರು** : ತಮಗೆ ನಾಳೆ ಅವಕಾಶ ಕೊಡುತ್ತೇನೆ, ಇವತ್ತು maximum ಅವಕಾಶ ಕೊಟ್ಟಿದ್ದೇನೆ.

**ಶ್ರೀ ವೈ.ಎಸ್.ವಿ. ದತ್ತ** : ಮಾನ್ಯ ಅಧ್ಯಕ್ಷರೆ, ಈ ಕಡೆಯಿಂದ ಕೇಳುವುದಾಗುತ್ತಿದೆ, ಆ ಕಡೆಯಿಂದ ಉತ್ತರ ಬರುತ್ತಿಲ್ಲ.

**ಅಧ್ಯಕ್ಷರು** : ಉತ್ತರ ಬರುತ್ತದೆ. ಮಾನ್ಯ ಕುಮಾರಸ್ವಾಮಿಯವರೆ, ಮಾತನಾಡಿ ಉತ್ತರ ಕೊಡಿಸುತ್ತೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಮಾನ್ಯ ಅಧ್ಯಕ್ಷರೆ, ಇತ್ತೀಚಿನ ಕೆಲವು ವರ್ಷಗಳಿಂದ ರಾಜ್ಯದ ಪ್ರಮುಖವಾದಂಥ ಕರ್ನಾಟಕ ಲೋಕಸೇವಾ ಆಯೋಗ ಸಂವಿಧಾನ ಚೌಕಟ್ಟಿನಲ್ಲಿರುವ ಒಂದು ಸಂಸ್ಥೆ ಇದು. ಈ ಒಂದು ಸಂಸ್ಥೆಯಲ್ಲಿ ನಡೆಯುತ್ತಿರುವಂಥ interviewಗಳ ಬಗ್ಗೆ ಹಲವಾರು ರೀತಿ ಬೇರೆ ಬೇರೆ ಚಟುವಟಿಕೆಗಳಿಗೆ ಕಾರಣವಾಗಿದೆ. ಇವತ್ತು ಭ್ರಷ್ಟಾಚಾರಕ್ಕೆ ಹೆಚ್ಚಿನ ರೀತಿಯಲ್ಲಿ ಇತ್ತು ಕೊಡುತ್ತಿದ್ದಾರೆ. ಹೀಗೆ ಹಲವಾರು ರೀತಿಯ ಆಪಾದನೆಗಳು ಮತ್ತು ಕೆಲವು ಮಾಧ್ಯಮಗಳ ಮುಖಾಂತರ ಬರುತ್ತಿರುವಂಥ ವರದಿಗಳನ್ನು ನೋಡಿದಾಗ.....

**ಅಧ್ಯಕ್ಷರು** : ಅಲ್ಲ, ತಾವು.....

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಅದಕ್ಕೆ ಪುರಕವಾಗಿ ಹೇಳಿಬಿಡುತ್ತೇನೆ.

**ಅಧ್ಯಕ್ಷರು** : ತಾವು ಮೊನ್ನೆ ದಿವಸ ನಿಯಮ 69ರ ಅಡಿಯಲ್ಲಿ ನೀಡಿರುವ ಬರ ಪರಿಹಾರದ ವಿಷಯವಾಗಿ ಹೇಳಿ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಮಾನ್ಯ ಅಧ್ಯಕ್ಷರೆ, ತಾವು ಬರ ಪರಿಹಾರವಾಗಿ ಹೇಳಿದ್ದೀರಾ, ನಾನು ಇದನ್ನೇ ಕೇಳಿ ಎಂದು ಹೇಳಿದ್ದೀರಿ ಎಂದು ವಿಷಯ ಹೇಳುತ್ತಿದ್ದೇನೆ. sorry

**ಅಧ್ಯಕ್ಷರು** : ತಾವು ಬರ ಪರಿಹಾರ ವಿಷಯವನ್ನು ಮೊನ್ನೆ ಕೊಟ್ಟಿದ್ದು, ಇವತ್ತು ಬಂದಿದೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು.

**ಶ್ರೀ ಜಗದೀಶ್ ಶೆಟ್ಟರ್** : ಮಾನ್ಯ ಅಧ್ಯಕ್ಷರೆ, ಇವತ್ತಿನ ಅಜೆಂಡಾ ಪ್ರಕಾರ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಿಷಯವಿದೆ. ತಾವು ನಿಯಮ 69ರ ಅಡಿಯ ಮೇಲೆ ತೆಗೆದುಕೊಂಡಿದ್ದೀರಿ.

**ಅಧ್ಯಕ್ಷರು :** ಈ ವಿಷಯವನ್ನು ಅವರು ಮೊನ್ನೆ ಕೊಟ್ಟಿದ್ದರು. ಇದು ಆದ ಕೂಡಲೇ ಅದೇ ವಿಷಯ ಬರುತ್ತದೆ.

**3. ನಿಯಮ 69ರ ಮೇರೆಗೆ 4 ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ**

**ಅಲ್ಪ ಕಾಲಾವಧಿ ಚರ್ಚೆ**

**1. ವಿಷಯ : ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ತೀವ್ರತೊಂದರೆಯಾಗಿರುವ ಬಗ್ಗೆ.**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳಲ್ಲಿ ಮಳೆಯ ಪ್ರಮಾಣ ಕಡಿಮೆ ಯಾಗಿರುವಂಥ ಹಿನ್ನೆಲೆಯಲ್ಲಿ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಪ್ರತಿಯೋಂದು ಹಳ್ಳಿಗಳಲ್ಲೂ ಕಾಣುತ್ತಿದ್ದೇವೆ. ಇದರ ಜೊತೆಗೆ ಸರ್ಕಾರದ ವರದಿಯ ಪ್ರಕಾರವೇ ಇವತ್ತು ಸುಮಾರು 155 ಹಳ್ಳಿಗಳು ಬರಗಾಲದ ವ್ಯಾಪ್ತಿಯಲ್ಲಿವೆ ಎಂಬ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಇವತ್ತು ಹೊಸ ಸರ್ಕಾರ ಬಂದ ನಂತರ ಕುಡಿಯುವ ನೀರಿನ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಯವರು ಡಿ.ಸಿ.ಗಳ ಮತ್ತು ಮುಖ್ಯ ನಿರ್ವಹಣಾಧಿಕಾರಿ, ಜಿಲ್ಲಾಪಂಚಾಯತ್ ಅಧಿಕಾರಿಗಳ ಸಭೇಯನ್ನು ಕರೆದು ಚರ್ಚೆ ಮಾಡಿರುವಂಥದ್ದನ್ನು ನಾನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಇವತ್ತು ಮುಖ್ಯಮಂತ್ರಿಗಳು ಅಧಿಕಾರಿಗಳ ಸಭೆಯನ್ನು ಕರೆದಾಗ ಹಣದ ಕೊರತೆ ಇಲ್ಲವೆಂದು ಹೇಳುತ್ತಾರೆ. ಆದರೆ ನಾವು ಶಾಸಕರುಗಳು ಅವರ ಭಾಗದ ಕುಡಿಯುವ ನೀರಿನ ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತಂದಾಗ, ಅವರು ಹಲವಾರು ಕಾರಣಗಳನ್ನು ಕೊಡುವಂಥದ್ದು ಹಾಗೂ ಚುನಾವಣೆ ಹಿನ್ನೆಲೆಯಲ್ಲಿ ಸುಮಾರು 80–90 ಬೋರ್‌ವೆಲ್‌ಗಳನ್ನು ಕೊರೆಸಿ, ಇವತ್ತು ಹಣ ಬಿಡುಗಡೆಯಾಗದೇ ಇರುವ ಹಿನ್ನೆಲೆಯಲ್ಲಿ ಬೋರ್‌ವೆಲ್ ಕೊರೆಯುವವರು ಮುಂದೆ ಬರದೇ ಇರುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನಾವು ಇವತ್ತು ಪ್ರತಿಯೊಂದು ಕ್ಷೇತ್ರದಲ್ಲಿ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಅಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಈ ಬಗ್ಗೆ ನಾನು ಮಾನ್ಯ ರಾಜ್ಯಪಾಲರ ಭಾಷಣದಲ್ಲೇ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತಂದಿದ್ದೇನೆ. ಇವತ್ತು ಕೆಲವು ಪತ್ರಿಕೆಗಳಲ್ಲಿ ಈ ವಿಷಯ ಬಂದಿದೆ. ಇವತ್ತು ಬಿತ್ತನೆ ಮಾಡಬೇಕಾಗಿ–